

# ಜೀವನೋತ್ಸಾಹದ ವೃಕ್ಷ!



ಜೀವನೋತ್ಸಾಹದ ವೃಕ್ಷ! ಹನಿ ನೀರಿನ ಸೆಲೆಯೂ ಇಲ್ಲದ ಬೆಂಗಾಡಿನಲ್ಲಿ ಹಸಿರು ಕುಡಿಯೊಡೆಯಲು ಸಾಧ್ಯವೇ? ಊಹಿಸಿಕೊಳ್ಳಲೂ ಸಾಧ್ಯವೇ ಇಲ್ಲ. ಆದರೆ ಶಜರತ್‌ಅಲ್‌ಹಯಾತ್ (ಟ್ರೀ ಆಫ್ ಲೈಫ್) ಎಂದು ಕರೆಸಿಕೊಳ್ಳುವ 32 ಅಡಿಗಳಷ್ಟು ಎತ್ತರದ ಮರವೊಂದು ಬಹರೇನ್ ದೇಶದಲ್ಲಿದೆ.

ಅಲ್ಲಿರುವ ಆಸ್ಕರ್ ನಗರದಿಂದ 10 ಕಿಲೋಮೀಟರ್ ದೂರದಲ್ಲಿ ಮರವು (ವೈಜ್ಞಾನಿಕ ಹೆಸರು ಫೆರೀಸೋಪಿಸ್ ಸಿನೆರಿಯಾರಿ) ನೀರಿರದ ಬರಡು ನೆಲದಲ್ಲಿ ಬೇರುಗಳನ್ನು ಬಿಟ್ಟು ನಳನಳಿಸುತ್ತಿದೆ. ಮೈಲುಗಳ ಸುತ್ತಳತೆಯಲ್ಲಿ ಯಾವುದೇ ಜಲದ ಒರತೆಯೂ ಕಾಣಬರುವುದಿಲ್ಲ! ಅಕ್ಕ ಪಕ್ಕದಲ್ಲಿ ಇತರೆ ಸಸ್ಯವರ್ಗಗಳ ಕುರುಹೂ ಸಹ ಇಲ್ಲವೇ ಇಲ್ಲ! ಆದರೂ ಈ ಮರವು ಒಣ ಉಸುಕಿನ ಭೂಮಿಯಲ್ಲಿ 400 ವರ್ಷಗಳಿಂದ ಛಲದಿಂದ ಬದುಕು ಸಾಗಿಸುತ್ತಿರುವುದು ಅಚ್ಚರಿಯ ಸಂಗತಿಯೇ ಸರಿ! ಇಂಥ ಮರಗಳು ಹೆಚ್ಚಾಗಿ ಅಮೆರಿಕದಲ್ಲಿ ಕಂಡು ಬರುತ್ತವೆಯಾದರೂ ಅವುಗಳ ಮೂಲ ಸ್ಥಾನ ಏಷ್ಯಾ. ಈ ಮರಗಳು ಒಣಭೂಮಿಗೆ ಚೆನ್ನಾಗಿ ಹೊಂದಿಕೊಳ್ಳುತ್ತವೆ ಮತ್ತು ವಾರ್ಷಿಕವಾಗಿ 150 ಮಿಲಿಮೀಟರ್‌ಗಿಂತ ಕಡಿಮೆ ಮಳೆ ಬೀಳುವ ಸ್ಥಳಗಳಲ್ಲಿಯೂ ಬೆಳೆಯಬಲ್ಲವು.

ಸ್ಥಳೀಯ ಕಥೆಗಳ ಪ್ರಕಾರ 'ಟ್ರೀ ಆಫ್ ಲೈಫ್' ಅನ್ನು 1583ರಲ್ಲಿ ನೆಡಲಾಗಿದೆ. ಇಂದಿಗೂ ಕೂಡ ಒಣಗದೆ ಉಳಿದುಕೊಂಡಿರುವ ಈ ಮರವು ಆರೋಗ್ಯಕರವಾಗಿ ಕಾಣುತ್ತಿದ್ದು, ತಾಜಾ ಹಸಿರು ಎಲೆಗಳನ್ನು ಹೊಂದಿದೆ. ಇದು ಮರುಭೂಮಿಯಲ್ಲಿರುವ ಹಸಿರ ಒರತೆಯಂತೆ ಬಹು ದೂರದಿಂದಲೂ ಭವ್ಯವಾಗಿ ಕಾಣಿಸುತ್ತದೆ.

■ ಪ್ರಿಯಾಂಕ ವಿ.ಎಚ್.